ಸಿ.ಸಿ. ನಂ.**2867/2025**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೇಣಿಕಾ ಎಂ.ಎಸ್ | ಪಿ.ಡಬ್ಲ್ಯೂ- **1** |
| ಗಂಡನ ಹೆಸರು | ಃ | ಶ್ರೀಧರ | ಸಿ.ಡಬ್ಲ್ಯೂ- **1** |
| ವಯಸ್ಸು | ಃ | **18** | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ವಿದ್ಯಾರ್ಥಿನಿ | ದಿಃ **19-02-2026** |
| ವಾಸ | ಃ | ಮಜ್ಜಿಗೆಹಳ್ಳಿ | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ನಾನು ಶಿವಮೊಗ್ಗದ ನ್ಯಾಶನಲ್ ಕಾಲೇಜುನಲ್ಲಿ ಪ್ರಥಮ ಬಿಸಿಎ ಓದುತ್ತಿದ್ದೇನ. ನನಗೆ ಹಾಸ್ಟೆಲ್ ಸಿಗದ ಕಾರಣ ಸಾಗರದಿಂದ ಶಿವಮೊಗ್ಗಕ್ಕೆ ಪ್ರಯಾಣ ಮಾಡುತ್ತಿದ್ದೆ. ದಿನಾಂಕ **24-7-2025** ರಂದು ಬೆಳಿಗ್ಗೆ **7-45** ಗಂಟೆಗೆ ನಾನು ಸಾಗರದಿಂದ ಶಿವಮೊಗ್ಗಕ್ಕೆ ಹೋಗಲು ಕೆಎ-**14** ಎಫ್ **0065** ಕೆಎಸ್ ಆರ್ ಟಿ.ಸಿ ಬಸ್ಸಿನಲ್ಲಿ ಹತ್ತಿರುತ್ತೇನೆ. ನಾನು ಆ ದಿನ ಬಸ್ಸಿನ ಮಧ್ಯಭಾಗದ ಎಡ ಬದಿಯಲ್ಲಿ ಕುಳಿತಿದ್ದೆ. ಆ ದಿನ ಮುಂಬಾಳು ಗ್ರಾಮದ ಮಸೀದಿ ಬಳಿ ಬಸ್ಸಿನ ಚಾಲಕ ಅತಿ ವೇಗದಲ್ಲಿ ಬಸ್ಸನ್ನು ಚಲಿಸಿ ಕೊಂಡು ಹೋಗುತ್ತಿದ್ದಾಗ ಎದುರುಗಡೆಯಿಂದ ಒಂದು ಟ್ಯಾಂಕರ್ ಬರುತ್ತಿತ್ತು ಅದನ್ನು ನೋಡಿ ಏಕಾ ಏಕಿ ಬಸ್ಸನ್ನು ಬಲಭಾಗಕ್ಕೆ ಹೋಗಿ ಟ್ಯಾಂಕರನ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತಾನೆ. ಆ ರಭಸಕ್ಕೆ ನನ್ನ ಹಿಂದೆ ಕುಳಿತಿದ್ದ ಪ್ರಯಾಣಿಕರು ನನ್ನ ಮೇಲೆ ಬಿದ್ದಿರುತ್ತಾರೆ ನನ್ನ ತುಟಿ ರಾಡಿಗೆ ತಾಕಿ ನನ್ನ **12** ಹಲ್ಲುಗಳು ಮುರಿದು ಹೋಗಿರುತ್ತವೆ. ನನ್ನ ತುಟಿ ಸಹ ಹರಿದು ಹೋಗಿರುತ್ತದೆ. ಕಾರಿನಲ್ಲಿ ಬಂದ ವ್ಯಕ್ತಿಗಳು ನನ್ನನ್ನು ಆನಂದಪುರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ. ಬಸ್ಸಿನಲ್ಲಿ

ಸುಮಾರು 40 ರಿಂದ 45 ಜನ ಪ್ರಯಾಣಿಕರು ಇದ್ದರು ಅವರಿಗೂ ಸಹ ಗಾಯಾಳಾಗಿರುತ್ತವೆ. ಹೆಚ್ಚಿನ ಚಿಕಿತ್ಸೆಗೆ ನನ್ನನ್ನು ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ 4 ಗಂಟೆಗೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಆನಂದಪುರ ಠಾಣೆಗೆ ಹೋಗಿ ದೂರು ದಾಖಲು ಮಾಡಿರುತ್ತೇನೆ. ಬಸ್ಸಿನ ಚಾಲಕ ರವೀಂದ್ರ ಎಂದು ತಿಳಿದು ಬಂದಿರುತ್ತದೆ.

ಪೊಲೀಸರು 2 ಗಂಟೆಗೆ ಪಂಚನಾಮ ಜರುಗಿಸಬೆಕೆಂದು ತಿಳಿಸಿದ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಘಟನ ಸ್ಥಳ ತೋರಿಸಿ ಕೊಟ್ಟ ಮೇರೆಗೆ ಪೊಲೀಸರು ನನ್ನ ಚಾಸಾ 2, 3 ರವರ ಸಮಕ್ಷಮ ಸ್ದಳ ಪಂಚನಾಮ ಜರುಗಿಸಿ ನಕಾಶೆ ತಯಾರಿಸಿ ಭಾವ ಚಿತ್ರ ತೆಗೆದಿರುತ್ತಾರೆ. ನಂತರ ಪೊಲೀಸ್ ಠಾಣೆಯಲ್ಲಿ ಬಸ್ಸನ್ನು ನಾನು ಗುರುತಿಸಿದ ಮೇರೆಗೆ ಸದರಿ ಬಸ್ಸನ್ನು ಸಹ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿ ಕೊಂಡು ಭಾವ ಚಿತ್ರ ತೆಗೆದಿರುತ್ತಾರೆ.

ಸಾಕ್ಷಿ ದೂರು, ಸ್ದಳ ಮತ್ತು ಅಮಾನತ್ತು ಪಂಚನಾಮೆ, ನಕಾಶೆ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.-1 ರಿಂದ 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಯಿಂದ ನಿ.ಪಿ.-4(ಎ) ಎಂದು ಗುರುತಿಸಲಾಯಿತು.ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಅವರು ಈ ದಿನ ನ್ಯಾಯಾಲಯದ ಮುಂದಿರುತ್ತಾರೆ. ಬಸ್ಸಿನ ಭಾವ ಚಿತ್ರ ನೋಡಿದರೆ ಗುರುತಿಸುತ್ತೇನೆ ಅದು ನಿಪಿ-7 ಮತ್ತು ನಿಪಿ-8 ರಲ್ಲಿ ಕಂಡು ಬಂದಿರುತ್ತದೆ.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ

**ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ | ಪಿ.ಡಬ್ಲ್ಯೂ- **2** |
| ತಂದೆ ಹೆಸರು | ಃ | ಸಣ್ಣ ಮಂಜಪ್ಪ | ಸಿ.ಡಬ್ಲ್ಯೂ- **2** |
| ವಯಸ್ಸು | ಃ | **38** | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ವ್ಯವಸಾಯ | ದಿಃ **19-02-2026** |
| ವಾಸ | ಃ | ಗೌರಿಹಳ್ಳಿ | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ಸಾಕ್ಷಿಯು ಸ್ಥಳ ಪಂಚನಾಮ ಮತ್ತು ಅಮಾನತ್ತು ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-**2** ರಿಂದ ನಿಪಿ**4** ಎಂದು ಗುರುತಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-**2** ಬಿ ರಿಂದ ನಿಪಿ**4** ಬಿ ಎಂದು ಗುರುತಿಸಲಾಯಿತು.

ದಿನಾಂಕ **25-7-2025** ರಂದು ನಾನು ಮತ್ತು ಚಾಸಾ **3** ರವರು ಮುಂಬಾಳು ಗ್ರಾಮದಲ್ಲಿ ಬಳಿ ಹೆದ್ದಾರಿ ಬಳಿ ಇದ್ದಾಗ ಕೆ. ಎಸ್ ಆರ್ ಟಿಸಿ ಬಸ್ಸು ಮತ್ತು ಒಂದುಟ್ಯಾಂಕರ್ ಗೆ ಅಪಘಾತ ಆದ ಸಂಬಂಧ ಪೊಲೀಸರು ಪಂಚನಾಮೆ ಜರುಗಿಸಲು ಬಂದಾಗ ಚಾಸ **1** ರವರು ಅಪಘಾತದ ಸ್ಥಳ ತೋರಿಸಿ ಕೊಟ್ಟ ಮೇರೆಗೆ ಪೊಲೀಸರು ಪಂಚನಾಮೆ ಜರುಗಿಸಿ ನಕಾಶೆ ತಯಾರಿಸಿರುತ್ತಾರೆ . ಅಲ್ಲ ಭಾವ ಚಿತ್ರ ಸಹ ತೆಗೆದಿರುತ್ತಾರೆ. ತದ ನಂತರ ಅಲ್ಲಿಂದ ನಾವು ಠಾಣೆಗೆ ಹೋದಾಗ ಅಪಘಾತಪಡಿಸಿದ ಬಸ್ಸು ಮತ್ತು ಅಪಘಾತಕ್ಕೆ ಇಡಾಗಿದ್ದ ಟ್ಯಾಂಕರ್ ವಾಹನ ಇದ್ದು ಅದನ್ನು ಚಾಸಾ **1** ರವರು ಗುರುತಿಸಿದ ಮೇರೆಗೆ ಅವುಗಳನ್ನು ನಮ್ಮ ಸಮಕ್ಷವು ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡು

ಭಾವ ಚಿತ್ರ ತೆಗೆದಿರುತ್ತಾರೆ. ಸಾಕ್ಷಿ ಸ್ಥಳ ಮತ್ತು ಅಮಾನತ್ತು ಪಂಚನಾಮೆಯ ಸಮಯದಲ್ಲಿ ಭಾವ ಚಿತ್ರ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ- **5** ರಿಂದ ನಿಪಿ-**8** ಎಂದು ಗುರುತಾಗಿರುತ್ತದೆ.

ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಸಮಾಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ

ಸಿ.ಸಿ. ನಂ.**2867/2025**

<u>ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು</u>
<u>ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಿದ್ದಲಿಂಗೇಶ್ವರ | ಪಿ.ಡಬ್ಲ್ಯೂ- **3** |
| ತಂದೆ ಹೆಸರು | ಃ | ಬಸಟ್ಟೆಪ್ಪ | ಸಿ.ಡಬ್ಲ್ಯೂ- **4** |
| ವಯಸ್ಸು | ಃ | **42** | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ಖಾಸಗಿ ಕೆಲಸ | ದಿಃ **19-02-2026** |
| ವಾಸ | ಃ | ಸಾಗರ | |

<u>ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-</u>

ದಿನಾಂಕ **24-7-2025** ರಂದು ನಾನು ಬೆಳಿಗ್ಗೆ **7-45** ರ ಸಮಯದಲ್ಲಿ ಶಿವಮೊಗ್ಗಕ್ಕೆ ಹೋಗಲು ಸಾಗರದಿಂದ ಕೆಎ-**14** ಎಫ್ **0065** ಬಸ್ಸನ್ನು ಹತ್ತಿರುತ್ತೇನೆ. ನಾನು ಬಸ್ಸಿನ ಹಿಂಬದಿಯಿಂದ **3** ನೇ ಸೀಟಿನಲ್ಲಿ ಕುಳಿತಿದ್ದೆ. ಆನಂದಪುರ ಇನ್ನು **3-4** ಕಿಮೀ ಇದ್ದಂತೆ ಅಂದರೆ ಮುಂಬಾಳು ಗ್ರಾಮದ ಬಳಿ ಸುಮಾರು **8-15** ರ ಸಮಯದಲ್ಲಿ ಬಸ್ಸಿನ ಚಾಲಕ ಬಸ್ಸನ್ನು ಅತಿ ವೇಗವಾಗಿ ಚಲಿಸಿಕೊಂಡು ಹೋಗುತ್ತಿದ್ದಾಗ ಆತ ಓವರ್ ಟೇಕ್ ಮಾಡುವ ಸಲುವಾಗಿ ಬಸ್ಸನ್ನು ಬಲಭಾಗಕ್ಕೆ ತೆಗೆದಾಗ ಎದುರುಗಡೆ ಯಿಂದ ಒಂದು ಲಾರಿ ಬರುತ್ತಿದ್ದು ಲಾರಿಗೆ ಡಿಕ್ಕಿಪಡಿಸಿರುತ್ತಾರೆ. ಅದರಿಂದ ನನ್ನ ಹಲ್ಲು ಸೀಟು ಹಿಂಬದಿ ಇದ್ದ ರಾಡಿಗೆ ತಾಗಿ ನನ್ನ **4** ಹಲ್ಲುಗಳು ಅಲಾಡಿರುತ್ತದೆ. ಸದರಿ ಬಸ್ಸಿನಲ್ಲಿ ನನ್ನ ಹೊರತುಪಡಿಸಿ ಇನ್ನು **20** ರಿಂದ **25** ಜನ ಪ್ರಯಾಣಿಕರು ಇದ್ದರು ಅವರಿಗೂ ಸಹ ಗಾಯಗಳು ಆಗಿರುತ್ತದೆ. ಸದರಿ ಬಸ್ಸಿನ ಚಾಲಕ ಈ ದಿವಸ ನ್ಯಾಯಾಲುದ ಮುಂದಿರುತ್ತಾರೆ. ಆರೋಪಿ ಓವರ್ ಟೇಕ್ ಮಾಡದೇ ಹೋಗಿದ್ದರೆ ಅಪಘಾತ ಆಗುತ್ತಿರಲಿಲ್ಲ.

ಬಸ್ಸು ಮತ್ತು ಟ್ಯಾಂಕರಿನ ಭಾವ ಚಿತ್ರ ನೋಡಿದರೆ ಗುರುತಿಸಬಲ್ಲೆ ಅದು ಈಗಾಗಲೇ ನಿಪಿ-**7** ಮತ್ತು ನಿಪಿ**8** ಎಂದು ಗುರುತಾಗಿರುತ್ತದೆ.

ಪಾಟೀ ಸವಾಲು ಮಾಡಲು ಅರೋಪಿ ಪರ ವಕೀಲರು ಸಮಾಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ

<u>ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು</u>
<u>ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವನಿತಾ ಎಸ್ ಎಸ್ | ಪಿ.ಡಬ್ಲ್ಯೂ- **4** |
| ಗಂಡನ ಹೆಸರು | ಃ | ಚಂದ್ರಶೇಖರ್ | ಸಿ.ಡಬ್ಲ್ಯೂ- **5** |
| ವಯಸ್ಸು | ಃ | **55** | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ಮ್ಯಾನಜರ್ ಡಿಸಿಸಿ ಬ್ಯಾಂಕ್ | ದಿಃ **19-02-2026** |
| ವಾಸ | ಃ | ಸಾಗರ | |

<u>ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-</u>

ದಿನಾಂಕ **24-7-2025** ರಂದು ನಾನು ಬೆಳಿಗ್ಗೆ **7-30** ರ ಸಮಯದಲ್ಲಿ ಶಿವಮೊಗ್ಗಕ್ಕೆ ಹೋಗಲು ಸಾಗರದಿಂದ ಕೆಎ-**14** ಎಫ್ **1690** ಬಸ್ಸನ್ನು ಹತ್ತಿರುತ್ತೇನೆ. ನಾನು ಬಸ್ಸಿನ ಮುಂಬದಿಯಿಂದ **3** ನೇ ಸೀಟಿನಲ್ಲಿ ಕುಳಿತಿದ್ದೆ. ನನಗೆ ನಿದ್ದೆಯಲ್ಲಿದ್ದ ಕಾರಣ ನಾನು ಮಲಗಿದ್ದೆ. ಸದರಿ ಬಸ್ಸು ಮುಂಬಾಳು ಗ್ರಾಮದ ಬಳಿ ಅಪಘಾತವಾಗಿರುತ್ತದೆ. ನಾನು ಮಲಗಿದ ಕಾರಣ ಅಪಘಾತ ಯಾವ ರೀತಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ದವಡೆಗೆ ಗಾಯವಾಗಿ ರಕ್ತ ಬರುತ್ತಿತ್ತು ನನ್ನನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಿರುತ್ತಾರೆ. ಯಾರ ತಪ್ಪಿಂದ ಅಪಘಾತವಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಚಾಲಕನನ್ನು ಗುರುತಿಸಲಾಗುವುದಿಲ್ಲ ಚಾಲಕನ ತಪ್ಪಿನಿಂದ ಅಪಘಾತ ವಾಗಿರುತ್ತದೆ ಎಂದು ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಬಸ್ಸಿನ ಭಾವ ಚಿತ್ರ ನೋಡಿದರೆ ಗುರುತಿಸಬಲ್ಲೆ ಅದು ನಿಪಿ-**7** ಮತ್ತು ನಿಪಿ**8** ರಲ್ಲಿ ಕಂಡು ಬರುವ ಬಸ್ಸಿನ ಭಾವ ಚಿತ್ರವಾಗಿರುತ್ತದೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಹಿ.ಸ. ಸ ರವರಿಂದಃ-

ಈ ಕೇಸಿನ ಆರೋಪಿ ಬಸ್ಸಿನ ಚಾಲಕನಾಗಿದ್ದು ಆತ ಬಸ್ಸನ್ನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಲಿಸಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಕೆಎ-52 ಬಿ 9658 ಕ್ಯಾಂಟರ್ ಲಾರಿಗೆ ಡಿಕ್ಕಿಪಡಿಸಿರುತ್ತಾನೆ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಈಗ ಓದಿಸಿ ಕೇಳಿಸಿ ಕೊಂಡ ನಿಪಿ-9 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ

**(**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು**,** ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲುಃ**-** </u>ಮಾನ್ಯ ಸ**.**ಸ**.**ಅ ರವರಿಂದಃ

ದಿನಾಂಕ 14-10-2024 ರಂದು ಬೆಳಿಗ್ಗೆ 09-00 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ.-2 ರವರು ಮನೆಯಲ್ಲಿ ಇದ್ದಾಗ ಈ ಕೇಸಿನ ಆರೋಪಿಗಳು ನಮ್ಮ ಮನೆಗೆ ಅತೀ ಕ್ರಮಣ ಪ್ರವೇಶ ಮಾಡಿ 1 ನೇ ಆರೋಪಿ ನನ್ನನ್ನು ಅವಾಚ್ಯ ಶಬ್ದದಿಂದ ನಿಂದಿಸಿ ದೊಣ್ಣೆಯಿಂದ ಎಡಕಾಲು ಮಂಡಿಯ ಮೇಲೆ ಹೊಡೆದು 2 ನೇ ಆರೋಪಿ ದೊಣ್ಣೆಯಿಂದ ನನ್ನ ತಲೆಗೆ ಮತ್ತು ಎಡಕೈಗೆ ಹೊಡೆದಿರುತ್ತಾನೆ. ಗಲಾಟೆಯನ್ನು ಬಿಡಿಸಲು ಬಂದ ಚಾ.ಸಾ.-2 ರವರಿಗೆ ಈ ಕೇಸಿನ ಆರೋಪಿಗಳು ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಈಗ ಓದಿ ಕೇಳಿಸಿಕೊಂಡ ನಿ.ಪಿ.-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 15-10-2024 ರಂದು ಪೋಲೀಸರು ನಮ್ಮ ಮನೆ ಬಳಿ ಬಂದಾಗ ಅವರಿಗೆ ಕೃತ್ಯ ನಡೆದ ಸ್ಥಳ ತೋರಿಸಿಕೊಟ್ಟು ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಮುಂದಿನ ಕ್ರಮಕ್ಕಾಗಿ ನನ್ನ ಚಾ.ಸಾ.-5 ಮತ್ತು 6 ರವರ ಸಮಕ್ಷಮ ಈಗ ಓದಿಸಿ ಕೇಳಿಸಿಕೊಂಡು ನಿ.ಪಿ.-2 ರಂತೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಮತ್ತು ನಿ.ಪಿ.-3 ರಂತೆ ನಕಾಶೆಯನ್ನು ಸಹ

ತಯಾರಿಸಿರುತ್ತಾರೆ ಮತ್ತು ಸದರಿ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡಿರುತ್ತೇವೆ. ಆರೋಪಿಗಳು ಇನ್ನು ಮುಂದೆ ನನ್ನ ತಂಟೆ ತಕರಾರಿಗೆ ಬರುವುದಿಲ್ಲ ಎಂದು ಹಿರಿಯರ ಸಮಕ್ಷಮದಲ್ಲಿ ತಿಳಿಸಿರುತ್ತಾರೆ. ಆ ಕಾರಣ ನಾನು ಈ ಕೇಸನ್ನು ನಡೆಸಲು ಇಚ್ಛಿಸುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.